## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:** | **156 (217)** |
| **ಮಾನ್ಯ ಸದಸ್ಯರ ಹೆಸರು:** | **ಶ್ರೀ ಐವಾನ್ ಡಿ'ಸೋಜ (ವಿಧಾನಸಭಾ ಕ್ಷೇತ್ರ)** |
| **ಉತ್ತರಿಸುವ ದಿನಾಂಕ:** | **16.07.2024** |
| **ಉತ್ತರಿಸುವ ಸಚಿವರು:** | **ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2016ರಲ್ಲಿ ಎಂ.ಆರ್.ಪಿ.ಎಲ್ ಮತ್ತು ಓ.ಎನ್.ಜಿ.ಸಿ 4ನೇ ಹಂತದಲ್ಲಿ ಸುಮಾರು 811 ಎಕರೆ ಭೂಮಿ ಯನ್ನು ಕುತ್ತೆತೂರು/ ಪೆರ್ಮುದೆ, ತೆಂಕಎಕ್ಕಾರು ಗ್ರಾಮ ಗಳಲ್ಲಿ ಸ್ವಾಧೀನ ಪಡಿಸಿಕೊಂಡಿದ್ದು, ಈವರೆಗೂ ಪುನರ್ ವಸತಿ ಹಾಗೂ ಪುನರ್ ಸೌಲಭ್ಯವನ್ನು ಒದಗಿಸದಿರು ವುದಕ್ಕೆ ಕಾರಣಗಳೇನು: (ವಿವರ ನೀಡುವುದು) | ಎಂ.ಆರ್.ಪಿ.ಎಲ್. 4ನೇ ಹಂತದ ಭೂಸ್ವಾಧೀನ ಕುರಿತಂತೆ, ಪುನರ್ವಸತಿ ಹಾಗೂ ಪುನಸೌಲಭ್ಯವನ್ನು ಒದಗಿಸುವ ಬಗ್ಗೆ ಈಗಾಗಲೇ ಆರ್ & ಆರ್ ಸಮಿತಿಯನ್ನು ದಿನಾಂಕ:17-11-2023 ರಂದು ಸರ್ಕಾರವು ರಚಿಸಿದ್ದು, ಜಿಲ್ಲಾಧಿಕಾರಿಗಳು ಉಡುಪಿ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:12-07-2024 ರಂದು ಆರ್ & ಆರ್ ಸಮಿತಿಯ ಸಭೆಯನ್ನು ಸ್ಥಳಿಯ ಶಾಸಕರು ಹಾಗೂ ಸಂಸದರ ಸಮಕ್ಷಮದಲ್ಲಿ ಜರುಗಿಸಲಾಗಿದ್ದು, ಸಭೆಯ ತೀರ್ಮಾನವನ್ನು ಅನುಸರಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಬೇಕಾಗಿರುತ್ತದೆ. |
| ಆ) | ಭೂಸ್ವಾಧೀನ ನಿಯಮದಂತೆ ನಿರ್ವಸಿತರಿಗೆ ನೀಡುವ ಸೌಲಭ್ಯವನ್ನು ನೀಡದಿರುವುದರಿಂದ ನಿರ್ವಸಿತರು ಬೀದಿಪಾಲು ಆಗಿದ್ದು ಈ ಬಗ್ಗೆ ಸರ್ಕಾರದ ನಿಲುವೇನು | ಭೂಸ್ವಾಧೀನ ನಿಯಮದಂತೆ ನಿರ್ವಸಿತರಿಗೆ ನೀಡುವ ಸೌಲಭ್ಯವನ್ನು ಕಲ್ಪಿಸುವ ಬಗ್ಗೆ ಆರ್ & ಆರ್ ಸಭೆಯ ತೀರ್ಮಾನದಂತೆ ನಿಯಮಾನುಸಾರ ಶೀಘ್ರವಾಗಿ ಕ್ರಮ ವಹಿಸಲಾಗುತ್ತದೆ. |

| | | |
|---|---|---|
| ಇ) | ನಿರ್ವಸಿತರ ಮಕ್ಕಳು ಉದ್ಯೋಗಕ್ಕಾಗಿ ಕಾಯುತ್ತಿದ್ದರೂ ಈ ಬಗ್ಗೆ ಯಾವುದೇ ಗಮನ ನೀಡದಿರುವುದರಿಂದ ಸರ್ಕಾರದ ಮೇಲೆ ಕೆಟ್ಟ ಅಭಿಪ್ರಾಯ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ಜಿಲ್ಲಾಧಿಕಾರಿಗಳು ಉಡುಪಿ ಇವರ ಅಧ್ಯಕ್ಷತೆಯಲ್ಲಿ ನಡೆದ ಆರ್ & ಆರ್ ಸಭೆಯ ತೀರ್ಮಾನದಂತೆ ನಿರ್ವಸಿತರ ಮಕ್ಕಳಿಗೆ ನಿಯಮಾನುಸಾರ ಉದ್ಯೋಗ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಈ) | ಈ ಬಗ್ಗೆ ಕೂಡಲೇ ಆರ್ & ಆರ್ ಸಮಿತಿಯ ಸಭೆ ಕರೆದು ಈ ಮೇಲಿನ ಸೌಲಭ್ಯಗಳನ್ನು ನಿಯಮದಂತೆ ಕಲ್ಪಿಸಲು ಎಂ.ಆರ್.ಪಿ.ಎಲ್ ಮತ್ತು ಓ.ಎನ್.ಜಿ.ಸಿ ಗೆ ಸರ್ಕಾರ ನಿರ್ದೇಶನ ನೀಡುವುದೇ | ದಿನಾಂಕ: 12-07-2024 ರಂದು ಆರ್ & ಆರ್ ಸಮಿತಿಯ ಸಭೆ ನಡೆದಿದ್ದು, ಸಭೆಯಲ್ಲಿನ ನಿರ್ಣಯದಂತೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ. |
| ಉ) | ನಿರ್ವಸಿತರಿಗೆ ಭೂಮಿಯನ್ನು ಯೋಗ್ಯವಲ್ಲದ ಸ್ಥಳದಲ್ಲಿ ನೀಡಲು ನಿರ್ಧರಿಸಿರುವುದು ಸರಿಯೇ? (ವಿವರ ನೀಡುವುದು) | |

**ಸಂಖ್ಯೆ: ಸಿಐ 232 ಐಎಪಿ 2024**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು